# ಪ್ರಜಾ ಪ್ರಗತಿ

### ಸಿದ್ಧಾರ್ಥ ಕಾಲೇಜಿನಲ್ಲಿ ಉದ್ಯೋಗ ಮೇಳ ಕಾರ್ಯಕ್ರಮ ಉದ್ಘಾಟನೆ

## ವೃತ್ತಿಪರ ಯಶಸ್ಸಿಗೆ ಸಂವಹನ ಕೌಶಲ್ಯ ಅತ್ಯಗತ್ಯ

• ಪ್ರಜಾಪ್ರಗತಿ.ಕಾಂ



ತುಮಕೂರು: ನಿರ್ದಿಷ್ಟ ಗುರಿ ತಲುಪಲು ಶಿಕ್ಷಣವು ಮುಖ್ಯವಾಗಿದೆ. ಅದರ ಹೊರತಾಗಿ ನೀವು ಪರಿಣಾಮಕಾರಿ ಸಂವಹನ ಕೌಶಲ್ಯ ಮತ್ತು ವೃತ್ತಿಪರ ನೈಪುಣ್ಯತೆಗಳು ಉದ್ಯೋಗ ಪಡೆಯಲು ಪ್ರಮುಖವಾಗಿದೆ ಎಂದು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರಳೀಧರ ಹಾಲಪ್ಪ ಅವರು ಅಭಿಪ್ರಾಯಪಟ್ಟರು.

ಅವರು ನಗರದ ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ಐಕ್ಯೂಎಸಿ ಮತ್ತು ಉದ್ಯೋಗ ತರಬೇತಿ ಮತ್ತು ನೇಮಕಾತಿ ವಿಭಾಗ ಹಾಗೂ ರೆಡ್ಡೀಸ್ ಫೌಂಡೇಶನ್ ಸಹಯೋಗದೊಂದಿಗೆ ವತಿಯಿಂದ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರದ ಒತ್ತಡವು ಪ್ರತಿಯೊಬ್ಬರನ್ನು ತಮ್ಮ ಜೀವನದಲ್ಲಿ ಏನನ್ನಾದರೂ ಸಾಧಿಸುವಂತೆ ಮಾಡುತ್ತದೆ. ಒಂದು ಒಳ್ಳೆಯ ಕೆಲಸಕ್ಕೆ ಹೋಗಲು ಮತ್ತು ಜಗತ್ತಿನಲ್ಲಿ ಬದುಕಲು ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಕೆಲವರು ಸರ್ಕಾರಿ ಅಧಿಕಾರಿಗಳಾಗಲು ಯೋಚಿಸುತ್ತಾರೆ, ಮತ್ತೆ ಕೆಲವರು ವಿದೇಶಕ್ಕೆ ಹೋಗಬೇಕೆಂದು ಯೋಚಿಸುತ್ತಾರೆ. ಇದಕ್ಕೆ ಬೇಕಾದ ಜ್ಞಾನ ಮತ್ತು ತರಬೇತಿಗಳನ್ನು ಪಡೆದುಕೊಳ್ಳಲು ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಮುರಳೀಧರ ಹಾಲಪ್ಪ ಹೇಳಿದರು.

ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೇಮಲತಾ.ಪಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಆಡಳಿತಾಧಿಕಾರಿ ಖಲಂದರ್ ಪಾಷಾ, ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ರಮೇಶ್ ಮಣ್ಣೆ, ಉದ್ಯೋಗ ಮತ್ತು ತರಬೇತಿ ವಿಭಾಗದ ಸಂಚಾಲಕರಾದ ಸೈಯದ್ ಬಾಬು ಹೆಚ್.ಬಿ ಮತ್ತು ವಿನಯ್ ಕುಮಾರ್, ರೆಡ್ಡೀಸ್ ಫೌಂಡೇಶನ್‌ನ ಪ್ರದೀಪ್ ವೇದಿಕೆಯಲ್ಲಿದ್ದರು. ಪ್ರಾಧ್ಯಾಪಕರಾದ ವಿನೋದ ಮತ್ತು ನಾಗಲಕ್ಷ್ಮಿ ಅವರು ಕಾರ್ಯಕ್ರಮ ನಿರೂಪಿಸಿದರೆ, ಮಹದೇವ ಮುಂಜಿ ವಂದನೆ ಸಲ್ಲಿಸಿದರು.

ಈ ಮೆಗಾ ಪ್ಲೇಸ್‌ಮೆಂಟ್ ಡ್ರೈವ್-2024 ರಲ್ಲಿ ಬಿಗ್‌ಬೀ, ಎಕ್ಸ್ ಪೀರಿಯೆನ್ಸ್ ಮ್ಯಾನೇಜ್ ಮೆಂಟ್, ಟಾಟಾ ಕ್ರೋಮಾ, ಫ್ಲಿಪ್‌ಕಾರ್ಟ್, ನೋ ಬ್ರೋಕರ್, ಮುತ್ತೂಟ್ ಫೈನಾನ್ಸ್ , ಟಿವಿಎಸ್ ಎಲೆಕ್ಟ್ರಾನಿಕ್ಸ್ ಸೇರಿದಂತೆ20 ಪ್ರತಿಷ್ಠಿತ ಕಂಪನಿಗಳು ಭಾಗವಹಿಸಿದ್ದು, 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದರು. ಪ್ರತ್ಯೇಕ ವಿಭಾಗವಾರು ಉದ್ಯೋಗಾಂಕ್ಷಿಗಳ ಸಂದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

> ಪರಿಸರದ ಒತ್ತಡವು ಪ್ರತಿಯೊಬ್ಬರನ್ನು ತಮ್ಮ ಜೀವನದಲ್ಲಿ ಏನನ್ನಾದರೂ ಸಾಧಿಸುವಂತೆ ಮಾಡುತ್ತದೆ. ಒಂದು ಒಳ್ಳೆಯ ಕೆಲಸಕ್ಕೆ ಹೋಗಲು ಮತ್ತು ಜಗತ್ತಿನಲ್ಲಿ ಬದುಕಲು ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು.
>
> । ಮುರಳೀಧರ ಹಾಲಪ್ಪ,
> ಕೌಶಲ್ಯಾಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ

Tumkur Edition Edition
Jul 20, 2024 Page No. 2
Powered by: erelego.com

## ವೃತ್ತಿಪರ ಯಶಸ್ಸಿಗೆ ಸಂವಹನ ಕೌಶಲ್ಯ ಅತ್ಯಗತ್ಯ: ಮುರಳೀಧರ ಹಾಲಪ್ಪ



ತುಮಕೂರು: ನಿರ್ದಿಷ್ಟ ಗುರಿ ತಲುಪಲು ಶಿಕ್ಷಣವು ಮುಖ್ಯವಾಗಿದೆ, ಅದರ ಹೊರತಾಗಿ ನೀವು ಪರಿಣಾಮಕಾರಿ ಸಂವಹನ ಕೌಶಲ್ಯ ಮತ್ತು ವೃತ್ತಿಪರ ನೈಪುಣ್ಯತೆ ಉದ್ಯೋಗ ಪಡೆಯಲು ಪ್ರಮುಖವಾಗಿದೆ ಎಂದು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರಳೀಧರ ಹಾಲಪ್ಪ ಅಭಿಪ್ರಾಯಪಟ್ಟರು. ನಗರದ ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ಐಕ್ಯೂಎಸಿ ಮತ್ತು ಉದ್ಯೋಗ ತರಬೇತಿ ಮತ್ತು ನೇಮಕಾತಿ ವಿಭಾಗ ಹಾಗೂ ರೆಡ್ಡೀಸ್ ಫೌಂಡೇಶನ್ ಸಹಯೋಗದೊಂದಿಗೆ ವತಿಯಿಂದ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿ, ಪರಿಸರದ ಒತ್ತಡವು ಪ್ರತಿಯೊಬ್ಬರನ್ನು ತಮ್ಮ ಜೀವನದಲ್ಲಿ ಏನನ್ನಾದರೂ ಸಾಧಿಸುವಂತೆ ಮಾಡುತ್ತದೆ, ಒಂದು ಒಳ್ಳೆಯ ಕೆಲಸಕ್ಕೆ ಹೋಗಲು ಮತ್ತು ಜಗತ್ತಿನಲ್ಲಿ ಬದುಕಲು ಸವಾಲುಗಳು ಎದುರಾಗುತ್ತವೆ, ಅವುಗಳನ್ನು ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಕೆಲವರು ಸರ್ಕಾರಿ ಅಧಿಕಾರಿಗಳಾಗಲು ಯೋಚಿಸುತ್ತಾರೆ. ಮತ್ತೆ ಕೆಲವರು ವಿದೇಶಕ್ಕೆ ಹೋಗಬೇಕೆಂದು ಯೋಚಿಸುತ್ತಾರೆ, ಇದಕ್ಕೆ ಬೇಕಾದ ಜ್ಞಾನ ಮತ್ತು ತರಬೇತಿ ಪಡೆದುಕೊಳ್ಳಲು ವಿದ್ಯಾರ್ಥಿಗಳು ಮುಂದಾಗಬೇಕು ಎಂದರು.

ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೇಮಲತಾ.ಪಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಆಡಳಿತಾಧಿಕಾರಿ ಖಲಂದರ್ ಪಾಷಾ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ರಮೇಶ್ ಮಣ್ಣೆ, ಉದ್ಯೋಗ ಮತ್ತು ತರಬೇತಿ ವಿಭಾಗದ ಸಂಚಾಲಕ ಸೈಯದ್ ಬಾಬು. ಹೆಚ್.ಬಿ. ಮತ್ತು ವಿನಯ್ ಕುಮಾರ್, ರೆಡ್ಡೀಸ್ ಫೌಂಡೇಶ ನ್‌ನ ಪ್ರದೀಪ್, ಪ್ರಾಧ್ಯಾಪಕರಾದ ವಿನೋದ, ನಾಗಲಕ್ಷ್ಮಿ, ಮಹದೇವ ಮುಂಜಿ ಹಾಜರಿದ್ದರು. ಈ ಮೆಗಾ ಪ್ಲೇಸ್‌ಮೆಂಟ್ ಡ್ರೈವ್-2024 ರಲ್ಲಿ ಬಿಗ್‌ಬೀ, ಎಕ್ಸ್‌ಪೀ ರಿಯೆನ್ಸ್ ಮ್ಯಾನೇಜ್‌ಮೆಂಟ್, ಟಾಟಾ ಕ್ರೋಮಾ, ಫ್ಲಿಪ್‌ಕಾರ್ಟ್, ನೋ ಬ್ರೋಕರ್, ಮುತ್ತೂಟ್ ಫೈನಾನ್ಸ್, ಟಿವಿಎಸ್ ಎಲೆಕ್ಟ್ರಾನಿಕ್ಸ್ ಸೇರಿದಂತೆ 20 ಪ್ರತಿಷ್ಠಿತ ಕಂಪನಿ ಗಳು ಭಾಗವಹಿಸಿದ್ದವು. 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದರು, ಪ್ರತ್ಯೇಕ ವಿಭಾಗವಾರು ಉದ್ಯೋಗಾಂಕ್ಷಿಗಳ ಸಂದರ್ಶನಕ್ಕೆ ಅವಕಾಶ ಮಾಡಿ ಕೊಡಲಾಗಿತ್ತು.